**2** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು**,** ವಿಜಯಪೂರ
ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್**.**ಸಿ**./**ಎಸ್**.**ಟಿ**.**ನಂ**.15/2021**
ಪಿ.ಡಬ್ಲೂ.01
ಸಿ.ಡಬ್ಲೂ.01

| | | |
|---|---|---|
| ಸಾಕ್ಷಿದಾರರ ಹೆಸರು | : | ಉಮೇಶ ಚವ್ಹಾಣ್ |
| ತಂದೆಯ ಹೆಸರು | : | ಸೋಮುಲು |
| ವಯಸ್ಸು | : | 31 ವರ್ಷ. |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಹೀರೆಬೇವನೂರು ತಾಂಡಾ. |

ಇಂದು ದಿನಾಂಕ **10-12-2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**.**

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**:**

1) ಚಾಸಾ-4 ನನ್ನ ತಂದೆ. ಚಾಸಾ-5 ನನ್ನ ಹೆಂಡತಿ. ಚಾಸಾ-6 ಮತ್ತು 7 ನನ್ನ ಅತ್ತಿಗೆರು. ಚಾಸಾ-8 ಮತ್ತು 14 ನನ್ನ ಅಣ್ಣನ ಮಕ್ಕಳು. ಚಾಸಾ-9, 10, 11 ರವರ ಪರಿಚಯ ಇದೆ. ಚಾಸಾ-12 ಮತ್ತು 13 ನನ್ನ ಅಣ್ಣಂದಿರು. ಚಾಸಾ-15 ನನ್ನ ತಾಯಿ. ನಾನು ಹಿಂದೂ ಲಮಾಣಿ ಜಾತಿಗೆ ಸೇರಿದವರು. ನ್ಯಾಯಾಲಯದ ಮುಂದೆ ಆರೋಪಿತರ ಪರಿಚಯ ಪರಿಚಯ ಇದೆ. ಅವರು ಹಿಂದೂ ಪಂಚಮಸಾಲಿ ಮತ್ತು ಹಿಂದೂ ಲಮಾಣಿ ಜಾತಿಗೆ ಸೇರಿದವರು.

2) ನಾವು ಹೀರೆಬೇವನೂರು ಸಕ್ಕರೆ ಕಾರ್ಖನೆ ಹಿಂಬಾಗದಲ್ಲಿ ತೋಟದಲ್ಲಿ ವಸತಿ ಇರುತ್ತೇವೆ. ಆರೋಪಿ 7 ಮತ್ತು 8 ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಅಭೀಷಕ್ ಇತನ ಪರಿಚಯ ಇದೆ. ಆರೋಪಿ 7 ಮತ್ತು 8 ಹೊಲಗಳು ನಮ್ಮ ಜಮೀನಿನ ಬಾಜು ಇವೆ. ವಿಠ್ಠಲ್, ಶಿವಲಿಂಗಪ್ಪ, ಸಂತೋಷ, ಕುಮಾರ, ವಿನೋದ, ಅಣ್ಣಪ್ಪ ಇವರ ಜಮೀನುಗಳು ನಮ್ಮ ಜಮಿನೀನ ಬಾಜು ಇವೆ. ಅಣ್ಣಪ್ಪ

ಶಿಘಣಪೂರ ಇವರ ಜಮೀನು ನಮ್ಮ ಜಮೀನಿನ ದೂರದಲ್ಲಿ ಇದೆ. ನಮ್ಮ ಜಮೀನು ಲಚ್ಯಾಣ-ಹೀರೆಬೇವನೂರು ಸ್ವಲ್ಪ ದೂರದಲ್ಲಿ ಇವೆ. ಆರೋಪಿತರು ತಮ್ಮ ತಮ್ಮ ಜಮೀನಿಗೆ ತಮ್ಮ ಜಮೀನಿನಲ್ಲಿ ಇರುವ ಹಾದಿ ಮೂಲಕ ಹಾಯಿದು ಹೋಗುತ್ತಿದ್ದು. ಅವರ ಜಮೀನಿಗಳಿಗೆ ಹೋಗಲು ಬೇರೆ ಹಾದಿ ಇದ್ದರೂ ಸಹ ನಮ್ಮ ಜಮೀನಿನ ಮೂಲಕ ಬೆಳೆಯಲ್ಲಿ ಹಾಯಿದು ಹೋಗುತ್ತಿದ್ದರು. ಈ ಬಗ್ಗೆ ನಮ್ಮ ಮತ್ತು ಅವರ ನಡುವೆ ತಕಾರಾರು ಇತ್ತು. ಈ ಬಗ್ಗೆ ಇಂಡಿ ಸಿವಿಲ್ ನ್ಯಾಯಾಲಯಲ್ಲಿ ಆರೋಪಿತರು ದಾವೆ ಮಾಡಿದ್ದರು. ಅದು ಇನ್ನೂ ಚಾಲು ಇದೆ.

3) ದಿಃ 05.02.2021 ರಂದು ಬೆಳಗ್ಗೆ 9.30 ಗಂಟೆ ಸುಮಾರಿಗೆ ನಾವು ತೋಟದ ವಸತಿಯಲ್ಲಿದ್ದಾಗ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಬಡಿಗೆಯಲ್ಲಿ ಏಕಾಏಕಿ ಹೊಡೆಬಡೆ ಮಾಡಿದ್ದರು. ಅಲ್ಲದೆ ನಮ್ಮ ಜಾತಿಯೆತ್ತಿ ಲಮಾಣಿ ಸೊಳ್ಳೆಮಕ್ಕಳು ಅಂತಾ ಬೈದಿದ್ದರು. ದಾರಿ ಬಿಡದೆ ಇದ್ದರೆ ಲಮಾಣಿ ಸೊಳ್ಳೆಮಕ್ಕಳ ನಿಮ್ಮನ್ನು ಖಲ್ಲಾಸು ಮಾಡುತ್ತೇವೆ ಅಂತಾ ಬೆದರಿಕೆ ಹಾಕಿದ್ದರು. ನಮ್ಮ ಮನೆಯ ಮುಂದೆ ಇದ್ದ ಬಡಿಗೆಯಲ್ಲಿ ವಿಠ್ಠಲ್, ಶಿವಲಿಂಗಪ್ಪ, ಸೋಮು ಅಲಿಯಾಸ ಸಂತೋಷ ಇವರು ನನ್ನ ತಾಯಿಗೆ, ಚಾಸಾ-14, ಚಾಸಾ-13 ಇವರಿಗೆ ಹಲ್ಲೆ ಮಾಡಿದ್ದರು. ನಮ್ಮ ಮನೆಯ ಮುಂದೆ ಇದ್ದ ಕಲ್ಲುಗಳಿಂದ ಉಳಿದ ಆರೋಪಿತರು ಹಲ್ಲೆ ಮಾಡಿರುತ್ತಾರೆ. ನನ್ನ ತಾಯಿಗೆ ಎಡಕಣ್ಣಿಗೆ, ಬಲಗೈ ಮುಂಗೈಗೆ, ಸೊಂಟಕ್ಕೆ ಪೆಟ್ಟು ಆಗಿತ್ತು. ಚಾಸಾ-14 ಇವನಿಗೆ ಎಡಕಣ್ಣಿನ ಕೆಳಕ ರಕ್ತ ಗಾಯವಾಗಿತ್ತು, ಸೊಂಟಕ್ಕೆ ಮತ್ತು ಹೊಟ್ಟೆಗೆ ಪೆಟ್ಟು ಆಗಿತ್ತು. ಚಾಸಾ-12 ಇವರಿಗೆ ಬಲಗಾಲು ತೊಡೆಗೆ, ಸೊಂಟಕ್ಕೆ ಪೆಟ್ಟು ಆಗಿತ್ತು. ಚಾಸಾ-5 ಸವಿತಾ ಇವರಿಗೆ ಬೆನ್ನಿಗೆ, ಸೊಂಟಕ್ಕೆ ಪೆಟ್ಟು ಆಗಿತ್ತು. ಚಾಸಾ-6 ಜಗ್ಗುಬಾಯಿಗೆ ತೊಡೆಗೆ, ಎದೆಗೆ, ಸೊಂಟಕ್ಕೆ ಪೆಟ್ಟು ಆಗಿತ್ತು. ಚಾಸಾ-7 ಇವರಿಗೆ ಕುತ್ತಿಗೆಗೆ ಪೆಟ್ಟು ಆಗಿತ್ತು. ಚಾಸಾ-8 ಅಮಿತ್ ಇತನಿಗೆ ತೊಡಗೆ, ಕಾಲಿಗೆ ಪೆಟ್ಟು ಆಗಿತ್ತು. ನನಗೆ ಯಾವುದೇ ಪೆಟ್ಟು ಆಗಿರಲಿಲ್ಲ.

ಜಗಳವನ್ನು ನನ್ನ ತಂದೆ ಚಾಸಾ-4 ಸೋಮಲು, ಚಾಸಾ-9 ಅಂಬಿಕಾ, ಚಾಸಾ-10 ಸುಶೀಲಾಬಾಯಿ ಬಿಡಿಸಿದ್ದರು. ಹೋಗುವಾಗ ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿದ್ದರು. ಹೋಗುವಾಗ ಕಲ್ಲು ಬಡಿಗೆಗಳನ್ನು ಅಲ್ಲಿಯೇ ಬಿಸಾಡಿ ಹೋಗಿದ್ದರು.

4) ಗಾಯಳುಗಳನ್ನು ಇಂಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಅಲ್ಲಿಂದ ವಿಜಯಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವು. ನಾನು ಆಸ್ಪತ್ರೆಗೆ ಹೋಗಿ ತೋರಿಸಿ ಬಂದು ದೂರು ನೀಡುವಾಗ ತಡ ಆಗಿದೆ.

5) ಈ ಬಗ್ಗೆ ನಾನು ದಿಃ 05.02.2021 ರಂದು ದೂರು ನೀಡಿದ್ದೇನೆ. ಸಾಕ್ಷಿಯು ದೂರಿನ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-1, ಸಾಕ್ಷಿ ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು. ದೂರನ್ನು ಚಾಸಾ-11 ಇವರ ಕಡೆಯಿಂದ ಬರೆಯಿಸಿದ್ದೇನೆ.

6) ನಾನು ದೂರು ನೀಡದ ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದರು. ನಾನು ಅವರಿಗೆ ಜಾಗೆ ಕಲ್ಲು ಮತ್ತು ಬಡಿಗೆಗಳನ್ನು ತೋರಿಸಿರುತ್ತೇನೆ. ಸಾಕ್ಷಿಯು ದಿಃ 06.02.2021 ರ ಸ್ಥಳ ಪಂಚನಾಮೆ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2, ಸಾಕ್ಷಿ ಸಹಿಯನ್ನು ನಿಪಿ-2(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನಾಲ್ಕು ಪೊಟೊಗಳಲ್ಲಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಅವುಗಳನ್ನು ನಿಪಿ-3 ರಿಂದ 6 ಅಂತಾ ಗುರುತಿಸಲಾಯಿತು.

7) ಅದೇ ದಿನ ನಾನು ತನಿಖಾಧಿಕಾರಿಗಳ ಮುಂದೆ ಮರು ಹೇಳಿಕೆ ನೀಡಿ ಸಿವಿಲ್ ವ್ಯಾಜ್ಯದ ದಾಖಲಾತಿಗಳನ್ನು ಮತ್ತು ಜಮೀನಿನ ಉತಾರೆಯನ್ನು ಹಾಜರಪಡಿಸಿರುತ್ತೇನೆ. 9ನೇ ಆರೋಪಿ ಅಭೀಷಕನಿಗೆ ಅವಿನಾಶ ಅಂತಲೂ ಕರೆಯುತಾರೆ ಅಂತಾ ಮರು ಹೇಳಿಕೆ ನೀಡಿದ್ದೆ. ಸಾಕ್ಷಿಯು ತಾನು ನೀಡಿದ ಉತಾರೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಅಂತಾ ಗುರುತಿಸಲಾಯಿತು.

8) ಆ ದಿನ ಆರೋಪಿತರು ಉಪಯೋಗಿಸಿದ ಕಲ್ಲು ಮತ್ತು ಬಡಿಗೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಬಡಿಗೆಗಳನ್ನು ತೋರಿಸಲಾಗಿ ಅವುಗಳ್ನು ಮು. ಮಾ 1 ರಿಂದ 6 ಮತ್ತು ಕಲ್ಲುಗಳನ್ನು ಮು. ಮಾ 7 ರಿಂದ 9 ಅಂತಾ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ರಿಂದ 4, 6 ರಿಂದ 8 ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರು ವಕೀಲರು ಸಲ್ಲಿಸಿದ **231(2)** ಸಿಆರ್**.**ಪಿ**.**ಸಿ ಆದೇಶದ ಪ್ರಕಾರ ಮುಂದೂಡಲಾಗಿದೆ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ**.**
**10/12/2024**

**2** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ
ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**15/2021**
ಪಿ.ಡಬ್ಲೂ.09
ಸಿ.ಡಬ್ಲೂ.00

ಸಾಕ್ಷಿದಾರರ ಹೆಸರು :
ತಂದೆಯ ಹೆಸರು :
ವಯಸ್ಸು : ವರ್ಷ.
ಉದ್ಯೋಗ :
ವಾಸಸ್ಥಳ :

ಇಂದು ದಿನಾಂಕ **10-12-2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1) ಚಾ

**(**ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆಯ ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.**)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ನ

ಪಾಟೀ ಸವಾಲುಃ ಶ್ರೀ.ವಿ.ವಿ.ಕೆ ವಕೀಲರಿಂದ ಆರೋಪಿತರ ಪರವಾಗಿಃ ಇರುವುದಿಲ್ಲ
ಅಂತಾ ಹೇಳಿರುತ್ತಾರೆ.

1) ನ

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
**10/12/2024**